ರಾಜ್ಯದಲ್ಲಿರುವ ಅರೇಬಿಕ್ ಶಾಲೆಗಳು

೧೮೧ (ಖ್ಯಳ) ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ ನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಒಟ್ಟು ಅರೇಬಿಕ್ ಶಾಲೆಗಳ ಸಂಖ್ಯೆ ಎಷ್ಟು ? ಈ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಶಾಲೆಗಳಿಗೆ ಅನುದಾನ ನೀಡುವುದನ್ನು ನಿಲ್ಲಿಸಿದ್ದ ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಒಟ್ಟು ಅರೇಬಿಕ್ ಶಾಲೆಗಳ ಸಂಖ್ಯೆ ೬೨ ವಿದ್ಯಾರ್ಥಿಗಳ ಸಂಖ್ಯೆಯು ಸಧ್ಯಕ್ಕೆ ಲಭ್ಯವಿರುವುದಿಲ್ಲ. ನಂತರ ಒದಗಿಸಲಾಗುವುದು.

ಆ) ಹೌದು. ಸರ್ಕಾರದ ಶೂನ್ಯಾಧಾರಿತ ಕಾರ್ಯ ನೀತಿಯಂತೆ ಸದರಿ ಯೋಜನೆಯನ್ನು ಸಧ್ಯಕ್ಕೆ ಕೈಬಿಡಲಾಗುವುದು.

೧೦-೦೦ ಎ. ಎಂ.

ಶ್ರೀ ಎ. ಎಂ. ಹಿಂಡಸಗೇರಿ.—ಅಧ್ಯಕ್ಷರೇ, ಮಾನ್ಯ ಮಂತ್ರಿಯವರು, ಒಟ್ಟು ಅರೇಬಿಕ್ ಶಾಲೆಗಳು ೯೨ ಇವೆ ಎಂದು ಹೇಳಿದ್ದಾರೆ. ಇವುಗಳಿವೆ, ಎಷ್ಟು ಗ್ರಾಂಟ್ಸ್ ಕೊಟ್ಟಿದ್ದರು ಎಂಬ ಬಗ್ಗೆ ಫಿಗರ್ ಹೇಳಿದರೆ ಚೆನ್ನಾಗಿರುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ನವೆಂಬರ್ ವರೆಗೆ ೬.೬ ಲಕ್ಷ ರೂಪಾಯಿಗಳು ಬೇಕಾಗಿತ್ತು. ಈ ಹಿಂದೆ ಏನಾಯಿತು ಎಂದರೆ ೧-೪-೧೯೮೮ರಲ್ಲಿ ಕೆಲವು ವಿಷಯಗಳ ಬಗ್ಗೆ ಈ ಅರಾಬಿಕ್ ಶಾಲೆಗಳಿಗೆ ಬಿಡುಗಡೆ ಮಾಡುತ್ತಿದ್ದ ಅನುದಾನವನ್ನು, ಶೂನ್ಯಾಧಾರಿತ ಕಾರ್ಯ ನೀತಿಯಂತೆ ನಿಲ್ಲಿಸಿದ್ದೆವು. ಆದರೆ ಅನೇಕ ಕಡೆಯಿಂದ ಹಾಗೂ ಶಾಸಕರಿಂದ ಬೇಡಿಕೆ ಬಂದಮೇಲೆ ಮತ್ತೆ ಆರ್ಥಿಕ ಇಲಾಖೆಯವರನ್ನು ಸಂಪರ್ಕ ಮಾಡಿ, ನವೆಂಬರ್‌ವರೆಗೆ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ. ಮತ್ತೆ ಡಿಸೆಂಬರ್‌ವರೆಗೆ ಕೊಡುವುದಕ್ಕೂ ಹೇಳಿದ್ದೇವೆ. ಒಂದು ಸಾರಿ ಗ್ರಾಂಟ್ ಇನ್ ಏಡ್ ರೂಲ್ಸ್ ಪ್ರಕಾರ ಅಳವಡಿಸಿದ ಮೇಲೆ, ಗ್ರಾಂಟ್ಸ್ ನಿಲ್ಲಿಸುವುದು ಸೂಕ್ತವಲ್ಲವೆಂದು ನಮ್ಮ ಅಭಿಪ್ರಾಯವು. ಈ ಕಾರಣದಿಂದ ಆರ್ಥಿಕ ಇಲಾಖೆಯವರ ಸಂಪರ್ಕ ಮಾಡಿ, ಮುಂದೆ ಕ್ರಮ ತೆಗೆದುಕೊಳ್ಳಲಾಗುವುದು.

ತುಮಕೂರು ಜಿಲ್ಲೆಯಲ್ಲಿ ಶಿಕ್ಷಕರ ನೇಮಕಾತಿ

೧೮೨ (೬೮೨) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಇತ್ತೀಚೆಗೆ ತುಮಕೂರು ಜಿಲ್ಲೆಯಲ್ಲಿ ನೇಮಕಾತಿ ಸಮಿತಿಯು ಪ್ರೌಢಶಾಲಾ ಶಿಕ್ಷಕರನ್ನು ನೇಮಿಸಿರುವುದು ನಿಜವಲ್ಲವೇ ?

ಆ) ಆಗಿದ್ದಲ್ಲಿ ಎಷ್ಟು ಮಂದಿ ಶಿಕ್ಷಕರನ್ನು ನೇಮಿಸಲಾಯಿತು ?

ಇ) ಈ ರೀತಿ ನೇಮಿಸಲಾದ ಶಿಕ್ಷಕರ ಪೈಕಿ ವಯಸ್ಸಿನ ವಯೋಮಿತಿ ಮೀರುತ್ತಿರುವ ಎಷ್ಟು ಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ ?

ಈ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀಮತಿ ಲೀಲಾದೇವಿ. ಆರ್. ಪ್ರಸಾದ್ (ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಖಿರ್.

ಇ) ವಯಸ್ಸಿನ ಪರಿಷ್ಕತೆಯ ಆಧಾರದ ಮೇಲೆ ನೇಮಕಾತಿ ಮಾಡಲು ಸಾಧ್ಯವಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಈ ಹಿಂದೆ ಡಿ. ಎಲ್. ಆರ್. ಸಿ. ಯಿಂದ ಪ್ರಕಟಣೆ ಮಾಡಿದಾಗ, ವಯೋಮಿತಿಯನ್ನು ಆಧರಿಸಿ ೫೦ ಪರ್ಸೆಂಟ್ ಕೆಲಸ ಕೊಡುತ್ತೇವೆ ಮತ್ತು ಮೆರಿಟ್ ಮೇಲೆ ೫೦ ಪರ್ಸೆಂಟ್ ಕೊಡುತ್ತೇವೆ ಎಂದು ಈ ಸದನದಲ್ಲಿ ಹಿಂದಿನ ಶಿಕ್ಷಣ ಸಚಿವರು ಹೇಳಿದ್ದಾರೆ.....

ಶ್ರೀ ಎಂ. ಚಂದ್ರಶೇಖರ್.—ಶೇಕಡ ೫೦ರಷ್ಟು ನೇರ ನೇಮಕಾತಿ ಮಾಡುತ್ತೇವೆ ಇನ್ನು ೫೦ಭಾಗ ಯಾರು ವಯೋಮಿತಿ ಮೀರಿದ್ದಾರೆ ಅವರಿಗೆ ಕೊಡುವುದು ಎಂದು ಹೇಳಿದ್ದೇನೆ...

ಶ್ರೀ ಬಿ. ಲಕ್ಕಪ್ಪ.—ಮಾಜಿ ಶಿಕ್ಷಣ ಸಚಿವರು ಹೇಳುವುದಕ್ಕೂ, ಈಗಿನ ಸ್ಪೇಟ್ ಸಚಿವರು ಹೇಳುವುದಕ್ಕೂ ವ್ಯತ್ಯಾಸ ಇದೆ. "ವಯಸ್ಸಿನ ಪರಿಷ್ಕತೆಯ ಆಧಾರದ ಮೇಲೆ ನೇಮಕಾತಿ ಮಾಡಲು ಸಾಧ್ಯವಿಲ್ಲ" ಎಂದು ಇವರು ಹೇಳುತ್ತಾರೆ. ಹಿಂದಿನ ಶಿಕ್ಷಣ ಸಚಿವರು ೫೦ ಪರ್ಸೆಂಟ್ ವಯೋಮಿತಿ ಆಧಾರದ ಮೇಲೆ ನೇಮಕ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇನೆಂದು ಹೇಳಿದ್ದರು ಹಾಗೂ ಅಭ್ಯರ್ಥಿ ಅರ್ಜಿ ಹಾಕುವ ಕಾಲಕ್ಕೆ, ವಯಸ್ಸು ೧೫–೨೦ ದಿವಸ ಮೀರಿದ್ದರೂ ಅಂತಹವರಿಗೆ ಪುನರ್ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದರು ಆದರೆ ಈಗ ಬಂದಿರತಕ್ಕ ಉತ್ತರದಲ್ಲಿ "ಸಾಧ್ಯವಿಲ್ಲ" ಎಂದು ಹೇಳಿದ್ದಾರೆ. ಆದ್ದರಿಂದ ಹಿಂದಿನ ಶಿಕ್ಷಣ ಸಚಿವರು ಹೇಳಿರುವುದು ನಿಜವೇ, ಅಲ್ಲವೇ ಎಂಬುದನ್ನು ಸನ್ಮಾನ್ಯ ಶಿಕ್ಷಣ ಸಚಿವರು ಹೇಳಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಕೇಕಡ ೫೦ ಟಿ. ಸಿ. ಪೆಚ್. ವಯೋಮಿತಿ ಆಗಿರುವವರಿಗೆ ಮಾತ್ರ ಸಂಬಂಧಪಟ್ಟಿದ್ದು. ೧೯೮೯ರ ಫೆಬ್ರುವರಿಯಲ್ಲಿ ಈ ವಯೋಮಿತಿಯಲ್ಲಿ ಎಲ್ಲಾ ವರ್ಗಗಳಲ್ಲೂ ಏರಿಕೆಯಾಗಿದೆ. ಆದರೆ ಪ್ರಕಾರ ಜಿಲ್ಲಾಪರಿಷತ್ತಿನವರ ಸಂದರ್ಶನ ಕರೆಯಬೇಕು.

ಶ್ರೀ ಬಿ. ಲಕ್ಕಪ್ಪ.—೬೦ ಜನರನ್ನು ತೆಗೆದುಕೊಳ್ಳಬೇಕಾದರೆ, ಅದರಲ್ಲಿ ೩೦ ಜನರನ್ನು ಮೆರಿಟ್ ಆಧಾರದ ಮೇಲೆ ಮತ್ತು ಇನ್ನು ೩೦ ಜನರನ್ನು ವಯೋಮಿತಿ ಆಧಾರದ ಮೇಲೆ ತೆಗೆದುಕೊಳ್ಳಬೇಕು. ಈ ವಯೋಮಿತಿದಾಟಿದವರಿಗೆ ಸಹಾಯಕವಾಗಲಿ ಎಂದು, ೫೦ ಪರ್ಸೆಂಟ್ ವಯೋಮಿತಿ ಆಧಾರದ ಮೇಲೆ ಕೊಡಬೇಕೆಂದು ನಾನು ಪ್ರಶ್ನೆ ಹಾಕಿದ್ದೆ. ಇದನ್ನು ತಾವು ಅನುಷ್ಠಾನಕ್ಕೆ ತರುತ್ತೀರಾ ? ಹಾಗೂ ಯಾವಾಗ ಈ ರೀತಿಯಾಗಿ ನೇಮಕಾತಿ ಮಾಡುತ್ತೀರಿ ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ದಿನಾಂಕ ೧೦–೨–೧೯೮೯ರಿಂದ ಕನಿಷ್ಟ ವಯೋಮಿತಿಯನ್ನು ಎಲ್ಲಾ ವರ್ಗಗಳಿಗೂ ಹೆಚ್ಚಿಸಲಾಗಿದೆ. ಈ ಪ್ರಕಾರ ಇನ್ನು ಮುಂದೆ ತೆಗೆದುಕೊಳ್ಳಲಾಗುವುದು. ಈ ೫೦ ಪರ್ಸೆಂಟ್‌ನ್ನು ಮುಂದಿನ ಪರ್ಷದಲ್ಲಿ ತುಂಬಿಕೊಳ್ಳುತ್ತಾರೆ.

ಶ್ರೀ ಬಿ. ಲಕ್ಕಪ್ಪ.—೫೦ ಪರ್ಸೆಂಟ್ ರಿಸರ್ವೇಷನ್ ಮಾಡಿದ್ದೇವೆಂದು ಹೇಳುತ್ತೀರಿ. ಮುಂದಿನ ಪರ್ಷ ಮಾಡುವುದಾದರೆ, ಈಗಾಗಲೇ ಡಿ. ಎಲ್. ಆರ್. ಸಿ. ಆಧಾರದ ಮೇಲೆ ೫೦ ಪರ್ಸೆಂಟ್ ತೆಗೆದುಕೊಂಡಿದ್ದೀರಿ. ಇನ್ನು ಉಳಿದ ೫೦ ಪರ್ಸೆಂಟ್ ವಯೋಮಿತಿ ಆಧಾರದ ಮೇಲೆ ಯಾವಾಗ ಗೆತೆದುಕೊಳ್ಳುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ನಾವು ಜಿಲ್ಲಾಪರಿಷತ್ತಿಗೆ ಸೂಚನೆ ಕಳುಹಿಸಿದ್ದೇವೆ. ಜಿಲ್ಲಾ ಪರಿಷತ್ತಿನವರು ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ. ಅವರಿಗೆ ಈ ವಯೋಮಿತಿ ಬಗ್ಗೆ ಆಜ್ಞೆ ಬೇಕಾಗಿತ್ತು, ಅದನ್ನು ಫೆಬ್ರುವರಿ ತಿಂಗಳಲ್ಲಿ ಕಳುಹಿಸಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಜಿಲ್ಲಾಪರಿಷತ್ತಿನವರು ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕಾದರೆ. ಅವರಿಗೆ ಹಣ ಬೇಕಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ಕಾರ, ಜಿಲ್ಲಾಪರಿಷತ್ತಿಗೆ ದುಡ್ಡು ಕೊಟ್ಟರೆ, ಅವರು ಕ್ರಮ ತೆಗೆದುಕೊಳ್ಳುತ್ತಾರೆ, ಇಲ್ಲದೇ ಹೋದರೆ.....

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಇದು ಅವರಿಗೆ ಬಿಟ್ಟಿದ್ದು, ನಾವು ಈಗಾಗಲೇ ಡೈರಕ್ಷನ್ ಕೊಟ್ಟಿದ್ದೇವೆ;